'ಡ್ರಾಮಾ ಜ್ಯೂನಿಯರ್ಸ್' ಹೆಸರಿನೊಂದಿಗೆ ಜೋಡಿಸಿಕೊಂಡು ಯೂಟ್ಯೂಬ್ ಚಾನಲ್ ಆರಂಭಿಸಿದರು. ಆರೂವರೆ ಲಕ್ಷಕ್ಕೂ ಹೆಚ್ಚು ಸಬ್‌ಸ್ಕ್ರೈಬರ್ ಅವರ ಚಾನಲ್‌ಗಿದ್ದಾರೆ. ಜೊತೆಯಲ್ಲಿ ಅದೇ ಹೆಸರಿನಲ್ಲಿ ಇನ್‌ಸ್ಟಾಗ್ರಾಮ್ ಖಾತೆಯನ್ನೂ ಹೊಂದಿದ್ದು ಅಲ್ಲಿಯೂ, ಐದೂವರೆ ಲಕ್ಷಕ್ಕೂ ಹೆಚ್ಚು ಹಿಂಬಾಲಕರನ್ನು ಹೊಂದಿದ್ದಾರೆ. ವಿಡಿಯೊ ಗೇಮ್ ಬಗ್ಗೆ ಮಾಹಿತಿ ಒದಗಿಸಲು 'ಸೂರಜ್ ಗೇಮಿಂಗ್' ಯೂಟ್ಯೂಬ್ ಚಾನಲ್‌ನ್ನು ನಿರ್ವಹಿಸುತ್ತಿದ್ದಾರೆ.

**ಡ್ರಾಮಾ ಜ್ಯೂನಿಯರ್ಸ್‌ನಿಂದ ಸಿನಿರಂಗದವರೆಗೆ ಸಾಗಿದ ಪ್ರತಿಭೆ**

'ಗ್ರಾಮೀಣ ಭಾಗದಲ್ಲೇ ಹುಟ್ಟಿ ಬೆಳೆದು, ಸರ್ಕಾರಿ ಶಾಲೆಯಲ್ಲಿ ಓದಿದವನು. ಅಪ್ಪ ಮತ್ತು ದೊಡ್ಡಪ್ಪ ನಾಟಕಗಳಲ್ಲಿ ಅಭಿನಯ ಮಾಡುತ್ತಿದ್ದರು. ನಟನೆಗೆ ನನಗೆ ಅವರೇ ಸ್ಫೂರ್ತಿ. ಅವರಿಂದಲೇ ಬಾಲ್ಯದಲ್ಲಿ ನಟನೆಯತ್ತ ಆಸಕ್ತಿ ಬೆಳೆಯಿತು' ಎಂದು ನಟನಾ ಕ್ಷೇತ್ರದತ್ತ ಉಂಟಾದ ಸೆಳೆತದ ಬಗ್ಗೆ ಎ.ಎಸ್. ಸೂರಜ್ ಹೇಳುತ್ತಾರೆ.

'6ನೇ ತರಗತಿಯಲ್ಲಿರುವಾಗ ಡ್ರಾಮಾ ಜ್ಯೂನಿಯರ್ಸ್ ರಿಯಾಲಿಟಿ ಶೋಗೆ ಹುಬ್ಬಳ್ಳಿಯಲ್ಲಿ ಆಡಿಷನ್ ನಡೆದಿತ್ತು. ಯಾವುದೇ ತಯಾರಿ ಇಲ್ಲದೆ ಅಲ್ಲಿಗೆ ತೆರಳಿದ್ದೆ. ಮೊದಲ ಪ್ರಯತ್ನದಲ್ಲೇ ಆಯ್ಕೆಯಾದೆ. ಬೆಂಗಳೂರಿನಲ್ಲಿ ಇನ್ನೊಂದು ಆಡಿಷನ್ ನಡೆಸಿದಾಗಲೂ ಅಲ್ಲಿಯೂ ನನ್ನ ನಟನೆಗೆ ಸೈ ಎಂದರು. ಶೋಗೆ ಆಯ್ಕೆಯಾದ ಬಳಿಕ ನಮಗೆ ತರಬೇತಿಗೆ ಮೆಂಟರ್‌ಗಳನ್ನು ಒದಗಿಸಿದರು. ಡ್ರಾಮಾ ಜ್ಯೂನಿಯರ್ಸ್ ನನ್ನ ಜೀವನಕ್ಕೆ ಹೊಸ ತಿರುವು ನೀಡಿತು. ಹೊಸ ಗುರುತು ಒದಗಿಸಿತು. ಈ ಕಾರಣಕ್ಕೆ ಅದೇ ಹೆಸರಿನೊಂದಿಗೆ ಯೂಟ್ಯೂಬ್ ಚಾನಲ್ ಆರಂಭಿಸಿದೆ' ಎಂದು ಸೂರಜ್ ಹೇಳಿದರು.



'ಕಿರುತೆರೆಯ ಶೋದಲ್ಲಿ ನಟಿಸಿದ ಸಾಧನೆ ಆ ಕಾಲಕ್ಕೆ ಸಮಾಧಾನ ತಂದುಕೊಟ್ಟಿತ್ತು. ಕನಸೊಂದು ನನಸಾದ ಸಮಯವದು. ಆದರೆ, ಡ್ರಾಮಾ ಜ್ಯೂನಿಯರ್ಸ್ ಶೋದಲ್ಲಿ ಜೊತೆಯಾಗಿದ್ದ ಸುಮಿತ್ ಸಂಕೋಜಿ ಜೊತೆ ಸೇರಿ ತಮಾಷೆಗಾಗಿ ಹಾಸ್ಯದ ಒಂದೆರಡು ವಿಡಿಯೊಗಳನ್ನು ಚಿತ್ರಿಸಿ ಜಾಲತಾಣದಲ್ಲಿ ಹರಿಬಿಟ್ಟಿದ್ದೆ. ಅದು ಸಾಕಷ್ಟು ವೈರಲ್ ಆಗಿತ್ತು. ಇದು ಯೂಟ್ಯೂಬರ್ ಆಗಿ ಬದಲಾಗಲು ಸಿಕ್ಕ ಇನ್ನೊಂದು ತಿರುವು' ಎಂದು ತಮ್ಮ ಸಾಧನೆಯ ಹಿಂದಿನ ಗುಟ್ಟು ತೆರೆದಿಟ್ಟರು.

'ನಿತ್ಯವೂ ನಮ್ಮ ಸುತ್ತಮುತ್ತ ನಡೆಯುವ ಘಟನೆಗಳನ್ನು, ಒಡನಾಟಕ್ಕೆ ಸಿಗುವ ಜನರೊಂದಿಗೆ ನಡೆಯುವ ಚರ್ಚೆಗಳನ್ನೇ ಹಾಸ್ಯದ ಕಂಟೆಂಟ್ ಆಗಿ ಪರಿವರ್ತಿಸಲು ಯೋಚಿಸುತ್ತೇನೆ. ಜನರಿಗೆ ರಂಜಿಸಲು ಸಾಧ್ಯ ಎಂದು ವಿಶ್ವಾಸ ಹುಟ್ಟಿಸುವ ಕಂಟೆಂಟ್‌ಗಳು ವಿಡಿಯೊಗಳಾಗುತ್ತವೆ. ವಿಡಿಯೊ ಮಾಡಲು ಒಮ್ಮೊಮ್ಮೆ ತಂದೆ ಅಥವಾ ಅವರ ಸ್ನೇಹಿತರ ನೆರವು ಪಡೆಯುತ್ತೇನೆ. ವಿಡಿಯೊ ಎಡಿಟಿಂಗ್‌ಗಳನ್ನೆಲ್ಲ ನಾನೇ ಸಿದ್ಧಪಡಿಸುತ್ತೇನೆ' ಎನ್ನುತ್ತಾರೆ ಸೂರಜ್.

'ಯೂಟ್ಯೂಬ್ ವಿಡಿಯೊ, ಇನ್‌ಸ್ಟಾ ರೀಲ್ಸ್‌ಗಳು ಸಾಕಷ್ಟು ಜನರನ್ನು ಸೆಳೆಯುವುದು ಅವರಿಂದ ಬರುವ ಸಂದೇಶ, ಕರೆಗಳಿಂದ ಗೊತ್ತಾಗುತ್ತದೆ. ಈ ವಿಡಿಯೊಗಳಿಂದ ಹಣ ಗಳಿಕೆಗಿಂತ ಜನರಿಂದ ಬರುವ ಹೊಗಳಿಕೆಯ ಮಾತುಗಳೆ ನನಗೆ ದೊಡ್ಡ ಆದಾಯ ಅಂದುಕೊಳ್ಳುತ್ತೇನೆ' ಎಂದು ಹೆಮ್ಮೆಯಿಂದಲೇ ಹೇಳಿಕೊಂಡರು ಅವರು.

'ಸಿನಿಮಾಗಳಲ್ಲಿ ನಟಿಸಬೇಕು ಎಂಬ ಬಯಕೆ ಇತ್ತು. ಕಿರುತೆರೆಯಲ್ಲಿನ ಪಾತ್ರ ಮೆಚ್ಚಿ 2017ರಲ್ಲಿ 'ನಾವು ಎಳೆಯರು ನಾವು ಗೆಳೆಯರು' ಸಿನಿಮಾದಲ್ಲಿ ನಟಿಸಲು ಮೊದಲು ಅವಕಾಶ ಸಿಕ್ಕಿತು. ಸುದೀಪ್ ಅಭಿನಯದ 'ಪೈಲ್ವಾನ್', ರಿಷಬ್ ಶೆಟ್ಟಿ ನಿರ್ದೇಶನದ 'ಸ.ಕಿ.ಪ್ರಾ.ಶಾಲೆ ಕಾಸರಗೋಡು' ಚಿತ್ರದಲ್ಲಿ ನಟಿಸಿದ್ದೇನೆ. ಈಚೆಗೆ ನಟಿಸಿದ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಸದ್ಯದಲ್ಲಿ ಬಿಡುಗಡೆಯಾಗಲಿದೆ. ಯೂಟ್ಯೂಬ್, ರೀಲ್ಸ್ ನೋಡಿ ಚಿತ್ರರಂಗದ ಹಲವರು ಕರೆಮಾಡಿ ಅವಕಾಶದ ಭರವಸೆ ನೀಡುತ್ತಿದ್ದಾರೆ' ಎಂದು ಸಿನಿಮಾರಂಗದ ಅವಕಾಶದ ಬಗ್ಗೆ ಮನಬಿಚ್ಚಿ ಮಾತನಾಡಿದರು.

'ಪುನೀತ್ ರಾಜಕುಮಾರ್ ನನ್ನ ನೆಚ್ಚಿನ ನಟ. ಅವರೊಂದಿಗೆ ನಟಿಸುವ ಆಸೆ ಇತ್ತು. ಅವರ ಪತ್ನಿ ಅಶ್ವಿನಿ ಅವರ ಪಿಆರ್‌ಕೆ ಪ್ರೊಡಕ್ಷನ್ ಸಂಸ್ಥೆ ನಿರ್ಮಿಸಿದ 'ಮಾರಿಗಲ್ಲು' ವೆಬ್‌ಸಿರೀಸ್‌ನಲ್ಲಿ ನಟಿಸಲು ಅವಕಾಶ ಸಿಕ್ಕಿದೆ. ಕದಂಬ ರಾಜಮನೆತನದ ಕುರಿತ ಕಥೆಯುಳ್ಳ ವೆಬ್‌ಸಿರೀಸ್‌ನಲ್ಲಿ ನಟಿಸಿದ್ದು ಮರೆಯಲಾಗದ ಅನುಭವ ನೀಡಿದೆ' ಎಂದರು.

'ನಟನೆ, ವಿಡಿಯೊಗ್ರಫಿಗಳಲ್ಲಿ ತೊಡಗಿಸಿಕೊಳ್ಳುತ್ತಲೇ ಅನಿಮೇಷನ್ ಡಿಪ್ಲೊಮಾ, ಸಿನಿಮಾ ಕೋರ್ಸ್ ಕೂಡ ಪೂರ್ಣಗೊಳಿಸಿದ್ದೇನೆ. ನನ್ನ ಪ್ರವೃತ್ತಿಗೆ, ಪ್ರತಿಭೆ ಹೊರಜಗತ್ತಿಗೆ ತಿಳಿಯಲು ತಂದೆ ಸುಭಾಷ್ ಆಚಾರಿ, ತಾಯಿ ಸುಮನಾ ಆಚಾರಿ ಸದಾ ಬೆನ್ನೆಲುಬಾಗಿದ್ದಾರೆ' ಎನ್ನಲು ಸೂರಜ್ ಮರೆಯಲಿಲ್ಲ.

'ಹಲವು ವಿಡಿಯೊಗಳಲ್ಲಿ ನನ್ನೊಂದಿಗೆ ಮುತ್ತಜ್ಜಿ ಲಕ್ಷ್ಮಿ ನಾಯ್ಕ ನಟಿಸಿದ್ದಾರೆ. ವಿವಾಹಕ್ಕೆ ಹುಡುಗಿ ನೋಡುವ ಕಂಟೆಂಟ್‌ನೊಂದಿಗೆ ತಯಾರಿಸಿದ್ದ ವಿಡಿಯೊದಲ್ಲಿ ಅವರು ಅಭಿನಯಿಸಿದ್ದರು. ಅವರ ಅಭಿನಯ, ಹಾಸ್ಯಭರಿತ ಮಾತುಗಳ ಜನರನ್ನು ರಂಜಿಸಿದ್ದವು. ಅಜ್ಜಿಯೊಂದಿಗೆ ವಿಡಿಯೊ ಮಾಡುವಂತೆ ಹಲವರು ಬೇಡಿಕೆ ಇಡುತ್ತಿದ್ದರು' ಎಂದು ಸೂರಜ್ ಹೇಳಿದರು.

'90ರ ಹರೆಯದ ಮುತ್ತಜ್ಜಿಯನ್ನು ಚಿತ್ರೀಕರಣಕ್ಕೆ ಅಣಿಗೊಳಿಸುವುದೇ ದೊಡ್ಡ ಸವಾಲು ಎನಿಸಿತ್ತು. ವಿಡಿಯೊಗಳನ್ನು ನಾನೇ ಚಿತ್ರಿಸಬೇಕಿತ್ತು. ಅವರಿಗೆ ಮೂರು ಶಬ್ದಕ್ಕಿಂತ ಉದ್ದದ ವಾಕ್ಯ ಹೇಳಿಕೊಡಲು ಆಗುತ್ತಿರಲಿಲ್ಲ. ಒಂದು ವಾಕ್ಯ ಹೇಳಿಕೊಡುವಷ್ಟರಲ್ಲಿ ಇನ್ನೊಂದು ವಾಕ್ಯ ಮರೆತು ಬಿಡುತ್ತಿದ್ದರು. ದೂರದಲ್ಲಿ ನಿಂತು ಹೇಳಿದರೆ ಅವರಿಗೆ ಕಿವಿ ಕೇಳಿಸುತ್ತಿರಲಿಲ್ಲ. ಹೀಗಾಗಿ ಹತ್ತಿರದಲ್ಲೇ ಕ್ಯಾಮೆರಾ ಹಿಡಿದು ನಿಂತು ಅವರಿಗೆ ಡೈಲಾಗ್‌ಗಳನ್ನು ಹೇಳಿಕೊಡುತ್ತ ಚಿತ್ರೀಕರಣ ಮಾಡಬೇಕಿತ್ತು. ಹಲವು ಸವಾಲು ಎದುರಿಸುತ್ತಿದ್ದೆ' ಎಂದು ತಾವು ಎದುರಿಸಿದ ಸವಾಲು ವಿವರಿಸಿದರು.

'ಮುತ್ತಜ್ಜಿ ಹಲವು ವಿಡಿಯೊಗಳಲ್ಲಿ ಅಭಿನಯಿಸಿ ಜನರಿಂದ ಸೈ ಎನಿಸಿಕೊಂಡಿದ್ದಾರೆ. ಸತ್ಯನಾರಾಯಣ ಕಥೆಯ ಪ್ರಸಾದ, ಸಿಸಿಟಿವಿ ವಿಡಿಯೊಗಳು ಸಾಕಷ್ಟು ವೈರಲ್ ಆದವು. ಇಳಿ ವಯಸ್ಸಿನಲ್ಲಿದ್ದ ಅವರು ವಯೋಸಹಜ ಅನಾರೋಗ್ಯಕ್ಕೆ ತುತ್ತಾಗಿದ್ದರಿಂದ ಅವರನ್ನು ಅಭಿನಯಕ್ಕೆ ಒತ್ತಾಯಿಸಲಿಲ್ಲ. ಕೆಲ ತಿಂಗಳಿನಿಂದ ಅವರು ವಿಶ್ರಾಂತಿಯಲ್ಲಿದ್ದು ಅವರೊಂದಿಗೆ ವಿಡಿಯೊ ಮಾಡುತ್ತಿಲ್ಲ. ಆದರೆ ನನ್ನ ಕಾಮಿಡಿ ಜರ್ನಿಗೆ ಸ್ಫೂರ್ತಿ ತುಂಬಿದವರಲ್ಲಿ ಅವರೂ ಒಬ್ಬರು' ಎಂದು ಸೂರಜ್ ಹೇಳುತ್ತಾರೆ. ■